ದಿನಾಂಕ 31.2.1992ರಂದು ಅಂತ್ಯಗೊಳ್ಳುವ ಕರ್ನಾಟಕ ಮಾನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 22ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳು.

IX ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೇ, ಶ್ರೀ ಓಂ ಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ರಾಜ್ಯಮಂತ್ರಿ)ಯವರ ಪರವಾಗಿ, ಅವರ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1956ನೇ ಸಾಲಿನ ಕಂಪನಿಗಳ ಕಾಯ್ದೆಯ 619(ಎ) ಕಲಮಿನ ಮೇರೆಗೆ ;

1987-88ನೇ ಸಾಲಿನ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ 18ನೇ ವಾರ್ಷಿಕ ವರದಿ.

ಅಧ್ಯಕ್ಷರು : ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅರ್ಜಿಗಳನ್ನು ಒಪ್ಪಿಸುವುದು.

Sri. K.C. Modgekar Desai :I present the following Petitions

(1) Regarding formation of roads to the lands belonging to the villages of Ventamuri. Belgaum taluk

(2) Regarding repairs to Gaddikarvi-koppa road in Bailahongal taluk

Sri. Sadath Ali Khan : I present the petition regarding illegal tresspass into the property belonging to Bijapur Mahadavai Muslim Jamat Vakf.

Mr. Speaker : Petitions are presented.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಕಛೇರಿಗೆ ಈ ರೂಲ್ಸ್ ಆಫ್ ಪ್ರೊಸೀಜರ್ 311ರ ಪ್ರಕಾರ ಮಾನ್ಯ ಗೃಹಸಚಿವರ ವಿರುದ್ಧ ಒಂದು ನೋಟೀಸನ್ನು ಕಳುಹಿಸಿದ್ದೆ. ಮತ್ತು ಆ ನೋಟೀಸಿನ ನಕಲು ಮಾನ್ಯ ಗೃಹಸಚಿವರಿಗೂ ಸಹ ಕಳುಹಿಸಿದ್ದೇನೆ. ಇದು 29ನೇ ಆಗಸ್ಟ್ 94ರಂದು.

ಅಧ್ಯಕ್ಷರು : ತಾವು ಕಳುಹಿಸಿದ್ದೀರಿ. ಇದನ್ನು 7ನೇ ತಾರೀಖಿಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು : ನಾಳೆ ಅಂತೂ ಆಗುವುದಿಲ್ಲ. ನಾಳೆ ಶಾಸಕರ ದಿನಾಚರಣೆ ಇದೆ.

ಶ್ರೀ ಆರ್. ವಿ. ದೇಶಪಾಂಡೆ : ನಾವು ಬೇಗನೆ ಮುಗಿಸುತ್ತೇವೆ.

ಅಧ್ಯಕ್ಷರು : 7ನೇ ತಾರೀಖು ಇದನ್ನು ತೆಗೆದುಕೊಳ್ಳೋಣ. ತಾವು ನೋಟೀಸನ್ನು ಕೊಟ್ಟಿದ್ದೀರಿ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು :

1. ಮಾನ್ಯ ಗೃಹ ಸಚಿವರ ಹಾಗೂ ಮಾನ್ಯ ವಸತಿ ಸಚಿವರ ವಿರುದ್ಧ ಚರ್ಚೆಗೆ ಮುಖ್ಯಮಂತ್ರಿಗಳಿಂದ ಹೇಳಿಕೆಗೆ ಒತ್ತಾಯ.

ಶ್ರೀ ಆರ್.ವಿ. ದೇಶಪಾಂಡೆ : ವಸತಿ ಸಚಿವರ ವಿರುದ್ಧ ನಾವು ಸಾಕಷ್ಟು ಚರ್ಚೆ ಮಾಡಿದ್ದೆವು. ಅವರು ಉತ್ತರ ಕೊಡುವುದಕ್ಕೆ ಸಮಯವನ್ನು ತೆಗೆದುಕೊಂಡರು. ಇನ್ನೂ ಅವರಿಂದ ಉತ್ತರ ಬಂದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡಬೇಕಾಗಿದೆ. ನಿರ್ಣಯ ಮಾಡುವುದು ಅದು ಬೇರೆ ಪ್ರಶ್ನೆ. ಚರ್ಚೆಗೆ ಒಂದು ಹಂತ ಆಗಬೇಕಲ್ಲ, ಅದು ಆಗುತ್ತಿಲ್ಲ. ನಾನು ಕೈಗಾ ಬಗ್ಗೆ ರೈಜ್ ಮಾಡಿದ್ದೆ. ಮುಖ್ಯ ಮಂತ್ರಿಗಳು ಇವತ್ತು ರಿಪ್ಲೈ ಮಾಡುತ್ತೇವೆ ಎಂದು ಹೇಳಿದ್ದರು. ನಾವು ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಸರ್ಕಾರದಿಂದ ಸರಿಯಾದ ಸಮಯದಲ್ಲಿ ಉತ್ತರ ಬಂದರೆ ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ : ಇವತ್ತು ಉತ್ತರ ಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಈ ವಿಚಾರ, ಬಹಳ ದಿವಸಗಳಿಂದ ಪೆಂಡಿಂಗ್ ಇದೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಕೆಲವು ನಿಮಿಷಗಳಲ್ಲಿಯೇ ಇದರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಅದರ ನಂತರ ಮಾನ್ಯ ಸಚಿವರು ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಉತ್ತರವನ್ನು ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ತಾವು ಯಾವುದೇ ಒಂದು ವಿಚಾರವನ್ನು ಕ್ರಮವತ್ತಾಗಿ ಇಲ್ಲಿ ಎತ್ತುವುದಕ್ಕೆ ನಮ್ಮದೇನೂ ಅಡ್ಡಿ ಇಲ್ಲ. ಮೊನ್ನೆ ಮಾನ್ಯ ಗೋಪಿನಾಥ ಸಾಂಡ್ರಾರವರ ವಿಚಾರದ ಬಗ್ಗೆ ಹೇಳಿದ್ದೀರಿ. ಅವರ ಉತ್ತರ ರೆಡಿಯಾಗಿದೆ. ಬೇಕಾದರೆ ಇವತ್ತೇ ತೆಗೆದುಕೊಳ್ಳಬಹುದು ಅಥವಾ ಸಂಜೆ ತೆಗೆದುಕೊಳ್ಳಬಹುದು. ಮಾನ್ಯ ಚೌಡರೆಡ್ಡಿಯವರ ಬಗ್ಗೆ ತಾವು ನೋಟೀಸ್ ಕೊಟ್ಟಿದ್ದೀರಿ. ಅದರ ಪ್ರಕಾರ ಅವರೇ ಇದ್ದು ಉತ್ತರ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ ತಾವು ರೈಜ್ ಮಾಡುವುದು, ಅವರು ನಾಳೆ ಉತ್ತರ ಕೊಡುವುದು, ಅದು ಬೇಕಾಗಿಲ್ಲ. ಅವರೂ ಕೂಡ ತಮ್ಮ ಉತ್ತರವನ್ನು ಸಿದ್ಧಪಡಿಸಿಕೊಳ್ಳಲಿ. 7ನೇ ತಾರೀಖು ಈ ವಿಷಯ ತೆಗೆದುಕೊಂಡರೆ ಅದಕ್ಕೆ ಉತ್ತರ ತಯಾರಾಗಿರುತ್ತದೆ.

12.20 ಪಿ.ಎಂ

ಈಗ ಪ್ರಸ್ತಾಪಿಸಿ ಹಾಗೆಯೇ ಬಿಟ್ಟರೆ ಏನು ಪ್ರಯೋಜನ. ಅದಕ್ಕೆ ಉತ್ತರ ಕೊಡಬೇಕಾಗುತ್ತದೆ. ಇದಕ್ಕೆ ಸ್ವಲ್ಪ ಸಮಯ ಕೊಡಬೇಕಾಗುತ್ತದೆ. ಸಹಜ ನ್ಯಾಯ ಸಿಗಬೇಕಾದರೆ ಸ್ವಲ್ಪ ಕಾಲಾವಕಾಶ ಕೊಡಬೇಕಾಗುತ್ತದೆ.